# 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

**ಎಸ್.ಸಿ. ನಂ.24/2025**

ಅ.ಸಾ.02

ಚಾ.ಸಾ. 09

| | | |
|---|---|---|
| ಸಾಕ್ಷಿದಾರರ ಹೆಸರು | : | ಸಚಿನ್ ಪಾಟೀಲ |
| ತಂದೆಯ ಹೆಸರು | : | ವಿರೂಪಾಕ್ಷಗೌಡ ಪಾಟೀಲ |
| ವಯಸ್ಸು | : | 25 ವರ್ಷಗಳು |
| ಉದ್ಯೋಗ | : | ಶೇತ್ಕಿ |
| ವಾಸಸ್ಥಳ | : | ಕುರುವಿನಕೊಪ್ಪ |
| ಸಾಕ್ಷಿಗೆ ದಿನಾಂಕ | : | **21/04/2026** ರಂದು ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಆರೋಪಿ-1 ನನ್ನ ಅಣ್ಣ. ಆರೊಪಿ-2 ರವರು ಆರೋಪಿ-1 ರವರ ಮಗ. ಅನುಸೂಯ ನನ್ನ ವೈನಿ, ಈಗ ಅವಳು ತೀರಿಕೊಂಡಿದ್ದಾಳೆ. ಸದರಿ ಅನುಸೂಯ ಈಕೆ ಒಂದು ವರ್ಷದ ಹಿಂದೆ ಸಾಯಂಕಾಲ 4 ಗಂಟೆ ಸಮಯದಲ್ಲಿ ಜಮೀನು ಸರ್ವೆ ನಂ. 41 ರಲ್ಲಿ ಮೃತಪಟ್ಟಿರುತ್ತಾಳೆ. ನಾನು ನಮ್ಮ ಜಮೀನಿನಲ್ಲಿ ಹೊಲಕ್ಕೆ ನೀರನ್ನು ಹಾಯಿಸುತ್ತಿದ್ದೆ. ಅನುಸೂಯ ನನ್ನ ಅತ್ತಿಗೆ ಜಮೀನಿನಲ್ಲಿ ನೀರು ಹರಿದಿದ್ದರಿಂದ ಕಾಲು ಜಾರಿ ಬಿದ್ದಿದ್ದಳು ಎಂದು ಕೇಳಿ ತಿಳಿದುಕೊಂಡಿದ್ದೆ. ನಾನು ಜಮೀನಿನಲ್ಲಿ ಜಾರಿ

ಬಿದ್ದು ಕೈ ಹಾಗೂ ತಲೆಗೆ ಪೆಟ್ಟು ಆಗಿತ್ತು. ಸದರಿ ಜಮೀನು ಸರ್ವೆ ನಂಬರ 41, 1 ಎಕರೆ 20 ಗುಂಟೆ ಇರುತ್ತದೆ. ಸದರಿ ಜಮೀನನ್ನು ನಾವು ಸಾಗುವಳಿ ಮಾಡುತ್ತಿದ್ದೇವೆ. ನಮ್ಮ ಜಮೀನಿನ ಪಕ್ಕದಲ್ಲಿ ವಿರೂಪಾಕ್ಷಗೌಡರವರ ಜಮೀನು ಇರುತ್ತದೆ. ಸದರಿ ಜಮೀನು ಸಹ 1 ಎಕರೆ 20 ಗುಂಟೆ ಇರುತ್ತದೆ. ಸದರಿ ಜಮೀನನ್ನು ಸಹ ನಾವೇ ಸಾಗುವಳಿ ಮಾಡುತ್ತಿದ್ದೆವು. ಸದರಿ ಎರಡೂ ಜಮೀನುಗಳಲ್ಲಿ ಗೋವಿನಜೋಳ ಬೆಳೆ ಬೆಳೆದಿದ್ದವು.

2. ನಿಪಿ-1 ದೂರಿನ ವಿಷಯ ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಠಾಣೆಗೆ ಕರೆಸಿರಲಿಲ್ಲ ಯಾವುದೇ ಹೇಳಿಕೆಯನ್ನು ಪಡೆದಿರಲಿಲ್ಲ. ನನ್ನನ್ನು ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನನಗೆ ಈ ಪ್ರಕರಣದ ಮಾಹಿತಿ ಇಲ್ಲ ನನ್ನ ಅತ್ತಿಗೆಯ ಸಾವಿಗೆ ಹಾಗೂ ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರಿಂದ

3. ನನ್ನ ಹಾಗೂ ಚಾಸಾ-1 ರವರ ವಿರುದ್ದ ಆರೋಪಿ ನಂ.2 ರವರು ಪ್ರಕರಣ ದಾಖಲು ಮಾಡಿದ್ದಾರೆ. ದಿಃ 30/12/2024 ರಂದು ಸಾಯಂಕಾಲ 4.00 ಗಂಟೆ

ಸುಮಾರಿಗೆ ಕುರುವಿನಕೊಪ್ಪ ಗ್ರಾಮದ ಜಮೀನು ರಿ.ಸ. ನಂ.47 ರಲ್ಲಿ, ಚಾಸಾ.13 ಈರಪ್ಪ @ ಈರಣ್ಣ ಕುರುಬಗಟ್ಟಿರವರ ರಿ.ಸ. ನಂ.41 ನೇ ಜಮೀನಿನಲ್ಲಿ ಹಾಯಿಸಿದ ನೀರು, ಆರೋಪಿತರು ಹಾದಾಡಲು ಅಂತ ಬಿಟ್ಟ ದಾರಿಯಲ್ಲಿ ಬಂದು ನಿಂತಿದ್ದರ ವಿಷಯವಾಗಿ 1 ಮತ್ತು 2 ನೇ ಆರೋಪಿತರಾದ ಕೂಡಿಕೊಂಡು, ಚಾಸಾ-1 ರವರಿಗೆ 1 ನೇ ಆರೋಪಿಯು ಬಡಿಗೆಯಿಂದ ಹೊಡೆ ಬಡೆ ಮಾಡಿ, ನನಗೆ ಕೊಲೆ ಮಾಡುವ ಉದ್ದೇಶದಿಂದ ಬಡಿಗೆಯಿಂದ ತಲೆಗೆ ಹೊಡೆ ಬಡೆ ಮಾಡಿ ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ .

4. ಚಾಸಾ-1 ರವರು ಜಗಳ ಬಿಡಿಸಿಕೊಳ್ಳಲು ಹೋದಾಗ ಹೆಂಡತಿ ಅನಸೂಯಾ ಪಾಟೀಲ ಇವಳಿಗೆ ಕೊಲೆ ಮಾಡುವ ಉದ್ದೇಶದಿಂದ 2 ನೇ ಆರೋಪಿಯು ಬಿಡಸಾಕ ಬರತಿ ಹಾದರಗಿತ್ತಿ ಅಂತಾ ಅವಾಚ್ಯವಾಗಿ ಬೈದು, ಜೀವ ಬೆದರಿಕೆ ಹಾಕಿ ತನ್ನ ಹತ್ತಿರ ಇದ್ದ ಚಾಕುವಿನಿಂದ ಆಕೆಯ ಎದೆಯ ಎಡಭಾಗಕ್ಕೆ ಹಾಗೂ ಹೊಟ್ಟೆಯ ಎಡಭಾಗಕ್ಕೆ ಚುಚ್ಚಿ ಭಾರಿಗಾಯಪಡಿಸಿ ಕೊಲೆ ಮಾಡಿದ್ದನು ಎಂದರೆ ಸರಿಯಲ್ಲ.

5. ಆರೋಪಿತರು ನಮಗೆ ಹಾದರಗಿತ್ತಿ ಮಕ್ಕಳಾ, ಬೋಸಡಿ ಮಕ್ಕಳಾ ಅಂತ ಅವಾಚ್ಯ ಬೈದಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಕೂಡಿಕೊಂಡು ಚಾಸಾ-1 ರವರಿಗೆ 1 ನೇ ಆರೋಪಿತನು ಬಡಿಗೆಯಿಂದ ಹೊಡೆ ಬಡೆ ಮಾಡಿ, ನನಗೆ ಕೊಲೆ ಮಾಡುವ ಉದ್ದೇಶದಿಂದ ಬಡಿಗೆಯಿಂದ ತಲೆಗೆ ಹೊಡೆ ಬಡೆ ಮಾಡಿ ರಕ್ತಗಾಯಪಡಿಸಿ

ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುವುದಾಗಿ ಈಗ ಓದಿ ಹೇಳಿದ ನಿಪಿ–9 ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾವು ಹಾಗೂ ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ. ರಾಜಿ ಮಾಡಿಕೊಂಡಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಜಿ ಸಿ ಬಿ ವಕೀಲರಿಂದಃ</u>**

**ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಜರೀನಾ)**

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಹಾಗೂ ವಿಶೇಷ ನ್ಯಾಯಾಧೀಶರು ಸಿ.ಬಿ.ಐ./ಎ.ಸಿ.ಬಿ.,

ಲೋಕಾಯುಕ್ತ, ಧಾರವಾಡ.